ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಡೈರೆಕ್ಟರ್ ಜನರಲ್ ಮತ್ತು
ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಕಛೇರಿ,
ನಂ 02, ನೃಪತುಂಗ ರಸ್ತೆ,
ಬೆಂಗಳೂರು – 560 001

ಸಂಖ್ಯೆ: 03/ಸಂಗ್ರಹ–1(3)/2018–19

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಕಛೇರಿ,
ನಂ.2, ನೃಪತುಂಗ ರಸ್ತೆ, ಬೆಂಗಳೂರು,
ದಿನಾಂಕ 16.10.2018.

## ಸು ತ್ತೋ ಲೆ

ವಿಷಯ:– ಪೊಲೀಸ್ ಇಲಾಖೆಯ ಮಹಿಳಾ ಪೊಲೀಸ್ ಅಧಿಕಾರಿಗಳು / ಸಿಬ್ಬಂದಿಯವರು ಧರಿಸುವ ಸಮವಸ್ತ್ರದ ಕುರಿತು.

ಉಲ್ಲೇಖ:– 1. ಪ್ರಧಾನ ಕಛೇರಿಯಲ್ಲಿ ದಿನಾಂಕ 03.09.2018 ರಂದು ನಡೆದ ಸಭೆ.
2. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 142 ಪಿಓಪಿ 2018, ದಿನಾಂಕ 09.10.2018.

* * * * *

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಮಹಿಳಾ ಪೊಲೀಸ್ ಅಧಿಕಾರಿಗಳು / ಸಿಬ್ಬಂದಿಯವರುಗಳು ಧರಿಸುವ ಸಮವಸ್ತ್ರದ ಬಗ್ಗೆ ಈ ಹಿಂದೆ ಹೊರಡಿಸಲಾದ ಸರ್ಕಾರದ ಆದೇಶ, ಕಛೇರಿ ಸುತ್ತೋಲೆಗಳನ್ನು ಕೂಲಂಕಷವಾಗಿ ಪರಾಮರ್ಶಿಸಲಾಯಿತು. ಈ ಬಗ್ಗೆ ಮಹಿಳಾ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಸಭೆಯನ್ನು ಕರೆದು ಚರ್ಚಿಸಲಾಯಿತು.

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಮಯದಲ್ಲಿ, ಅಪರಾಧ ಕೃತ್ಯ ಸ್ಥಳಕ್ಕೆ ಭೇಟಿ ನೀಡುವಾಗ, ಖೈದಿಗಳನ್ನು ಬೆಂಗಾವಲು ಮಾಡುವ ಸಂದರ್ಭದಲ್ಲಿ, ಕಳ್ಳರನ್ನು ಬೆನ್ನೆತ್ತಿ ಹಿಡಿಯುವ ಸಂದರ್ಭದಲ್ಲಿ ಮತ್ತು ಇನ್ನಿತರೆ ಕರ್ತವ್ಯಗಳ ಸಮಯದಲ್ಲಿ ಸೀರೆಯನ್ನು ಧರಿಸಿ ಕೆಲಸ ನಿರ್ವಹಿಸುವುದು ಅಸೌಕರ್ಯತೆಯನ್ನು ಉಂಟು ಮಾಡುತ್ತದೆ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಉಲ್ಲೇಖ–2 ರಲ್ಲಿ ಸರ್ಕಾರವು ಆದೇಶವನ್ನು ಹೊರಡಿಸಿದ್ದು, ಸದರಿ ಆದೇಶದನ್ವಯ ಮಹಿಳಾ ಪೊಲೀಸ್ ಅಧಿಕಾರಿ / ಸಿಬ್ಬಂದಿಗಳು ಸಮವಸ್ತ್ರವನ್ನು ಧರಿಸುವ ಕುರಿತು ಚಾಚೂ ತಪ್ಪದೆ ಕ್ರಮ ಕೈಗೊಳ್ಳಲು ಸೂಚಿಸಿದೆ.

2/–

ಸಮವಸ್ತ್ರದ ಹೊರತಾಗಿ ಮಹಿಳಾ ಪೊಲೀಸ್ ಅಧಿಕಾರಿ / ಸಿಬ್ಬಂದಿಗಳು ಕೇಶವಿನ್ಯಾಸ, ಕಿವಿಯೋಲೆ, ಹಣೆಬಿಂದಿ ಮತ್ತು ಬಳೆಗಳನ್ನು ಧರಿಸುವ ಸಂಬಂಧ ಈ ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು:

1) **ಕೇಶ ವಿನ್ಯಾಸ:**

- ತಲೆ ಕೂದಲು ಹರಡದಂತೆ ಒಟ್ಟುಗೂಡಿಸಿ ತುರುಬು ಕಟ್ಟಿಕೊಂಡು ಕಪ್ಪು ಬಣ್ಣದ ನೆಟೆಡ್ ಬ್ಯಾಂಡ್ ಅನ್ನು ಸುತ್ತುವುದು. ಕಪ್ಪು ಬಣ್ಣದ ಹೇರ್ ಪಿನ್/ಹೇರ್ ಬ್ಯಾಂಡ್ ಅನ್ನು ಮಾತ್ರ ಧರಿಸುವುದು. ಇತರೆ ಬಣ್ಣದ ಹೇರ್ ಪಿನ್, ಹೇರ್ ಬ್ಯಾಂಡ್, ಹೂ ಅಥವಾ ಇತರೆ ಪರಿಕರಗಳನ್ನು ಧರಿಸುವಂತಿಲ್ಲ. ಕೂದಲಿಗೆ ಬಣ್ಣ ಹಚ್ಚುವಂತಿದ್ದಲ್ಲಿ ಕಪ್ಪು ಬಣ್ಣವನ್ನು (ಡೈ) ಮಾತ್ರ ಬಳಸುವುದು.

2) **ಕಿವಿಯೋಲೆ, ಹಣೆಬಿಂದಿ, ಬಳೆ:**

- ಕಿವಿಯೋಲೆ ಮತ್ತು ಹಣೆಬಿಂದಿಯನ್ನು ಧರಿಸುವಂತಿದ್ದಲ್ಲಿ ಚಿಕ್ಕ ಮಾದರಿಯ ಒಂದು ಜೊತೆ ಓಲೆಯನ್ನು (Small Stud) ಧರಿಸುವುದು ಮತ್ತು ಚಿಕ್ಕ ಹಣೆಬಿಂದಿಯನ್ನು ಮಾತ್ರ ಇಟ್ಟುಕೊಳ್ಳುವುದು. ಬಳೆಯನ್ನು ಹಾಕಿಕೊಳ್ಳುವಂತಿದ್ದಲ್ಲಿ ಒಂದು ಸಣ್ಣ ಗಾತ್ರದ ಲೋಹದ ಬಳೆಯನ್ನು ಮಾತ್ರ ಧರಿಸಬಹುದು.

ಎಲ್ಲಾ ಘಟಕಾಧಿಕಾರಿಗಳು ಮೇಲೆ ವಿವರಿಸಲಾದ ಎಲ್ಲಾ ಅಂಶಗಳನ್ನು ಯಥಾವತ್ತಾಗಿ ತಕ್ಷಣದಿಂದಲೇ ಜಾರಿಗೆ ತರಲು ಸೂಕ್ತ ಕ್ರಮ ತೆಗೆದುಕೊಳ್ಳುವುದು. ಈ ಸುತ್ತೋಲೆ ತಲುಪಿದ ಸ್ವೀಕೃತಿಯನ್ನು ಒಂದು ವಾರದ ಒಳಗಾಗಿ ಈ ಕಛೇರಿಗೆ ತಲುಪುವಂತೆ ಕಳುಹಿಸುವುದು.

(ನೀಲಮಣಿ ಎನ್.ರಾಜು, ಐಪಿಎಸ್)
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್.

ಗೆ:
ಎಲ್ಲಾ ಘಟಕಾಧಿಕಾರಿಗಳಿಗೆ.

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್
ಆಫ್ ಪೊಲೀಸ್‌ರವರ ಕಾರ್ಯಾಲಯ,
ಕರ್ನಾಟಕ ರಾಜ್ಯ, ನಂ. 2, ನೃಪತುಂಗ ರಸ್ತೆ,
ಬೆಂಗಳೂರು – 560 001

ಸಂಖ್ಯೆ: 03/ಸಂಗ್ರಹ-1(3)/2018-19

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು,
ದಿನಾಂಕ 11.10.2018.

## ಹಿಂಬರಹ

ಪೊಲೀಸ್ ಇಲಾಖೆಯ ಮಹಿಳಾ ಪೊಲೀಸ್ ಅಧಿಕಾರಿ ಸಿಬ್ಬಂದಿಯವರು ಸಮವಸ್ತ್ರ ಧರಿಸುವ ಕುರಿತು ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 142 ಪಿಓಪಿ 2018, ದಿನಾಂಕ 09.10.2018 ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ಸರ್ಕಾರದ ನಿರ್ದೇಶನದಂತೆ ಮಹಿಳಾ ಪೊಲೀಸ್ ಅಧಿಕಾರಿ / ಸಿಬ್ಬಂದಿಗಳು ನಿಗದಿಪಡಿಸಲಾದ ಸಮವಸ್ತ್ರವನ್ನು ಇನ್ನು ಮುಂದೆ ಧರಿಸಿಕೊಳ್ಳಲು ಅನುಕೂಲವಾಗುವಂತೆ ಸಮವಸ್ತ್ರವನ್ನು ಹೊಲಿದು ನೀಡಲು ತಮ್ಮ ಘಟಕದ ಪೊಲೀಸ್ ಕಲ್ಯಾಣ ಕೇಂದ್ರಗಳಿಗೆ ಸೂಕ್ತ ಸೂಚನೆಗಳನ್ನು ನೀಡುವುದು ಹಾಗೂ, ಸರ್ಕಾರದ ಆದೇಶದ ಪ್ರತಿಯನ್ನು ಸ್ವೀಕರಿಸಿದ ಬಗ್ಗೆ ಮತ್ತು ಸರ್ಕಾರದ ನಿರ್ದೇಶನದಂತೆ ಕ್ರಮ ಕೈಗೊಂಡ ಕುರಿತು ಪಾಲನಾ ವರದಿಯನ್ನು ಅಕ್ಟೋಬರ್, 2018 ರ ಅಂತ್ಯದೊಳಗೆ ಈ ಕಛೇರಿಗೆ ಕಳುಹಿಸಿಕೊಡಲು ಸೂಚಿಸಲಾಗಿದೆ.

(ಪಿ.ಹರಿಶೇಖರನ್, ಐಪಿಎಸ್)
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಪರವಾಗಿ,

ಗೆ,

ಎಲ್ಲಾ ಘಟಕಾಧಿಕಾರಿಗಳು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪೊಲೀಸ್ ಇಲಾಖೆಯ ಮಹಿಳಾ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರು ಧರಿಸುವ ಸಮವಸ್ತ್ರದ ಕುರಿತು–ಆದೇಶ.

ಓದಲಾಗಿದೆ:

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: 03/ಸಂಗ್ರಹ-1(3)/2018-19, ದಿನಾಂಕ:15.09.2018.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪತ್ರದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಮಹಿಳಾ ಅಧಿಕಾರಿ/ಸಿಬ್ಬಂದಿಗಳು ಧರಿಸುವ ಸಮವಸ್ತ್ರದ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 246 ಪಿಇಸಿ 72 ದಿನಾಂಕ:23.03.1973, ಸಂಖ್ಯೆ:ಹೆಚ್‌ಡಿ 34 ಇಎಫ್‌ಎಸ್ 93, ದಿನಾಂಕ:17.11.1998 ಮತ್ತು ಸಂಖ್ಯೆ:ಹೆಚ್‌ಡಿ 147 ಇಎಫ್‌ಎಸ್ 2011, ದಿನಾಂಕ:17.02.20112 ಮತ್ತು ಡಿಜಿ ಮತ್ತು ಐಜಿಪಿ ರವರ ಕಛೇರಿಯ ದಿನಾಂಕ:13.01.2013, 13.04.2003ರ ಸುತ್ತೋಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

ಈ ಸಂಬಂಧದಲ್ಲಿ ದಿನಾಂಕ:03.09.2018 ರಂದು ವಿವಿಧ ಶ್ರೇಣಿಯ ಮಹಿಳಾ ಅಧಿಕಾರಿ / ಸಿಬ್ಬಂದಿಯವರುಗಳ ಸಭೆಯನ್ನು ಕರೆದು, ಸಮವಸ್ತ್ರದ ಧರಿಸುವ ಕುರಿತು ಕೂಲಂಕುಷವಾಗಿ ಚರ್ಚಿಸಲಾಯಿತು. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಮಯದಲ್ಲಿ, ಅಪರಾಧ ಕೃತ್ಯ ಸ್ಥಳಕ್ಕೆ ಭೇಟಿ ನೀಡುವಾಗ, ಖೈದಿಗಳನ್ನು ಬೆಂಗಾವಲು ಮಾಡುವ / ಕಳ್ಳರನ್ನು ಬೆನ್ನತ್ತಿ ಹಿಡಿಯುವ / ಮತ್ತು ಇನ್ನಿತರೆ ಕರ್ತವ್ಯಗಳ ಸಮಯದಲ್ಲಿ ಸೀರೆಯನ್ನು ಧರಿಸಿ ಕೆಲಸ ನಿರ್ವಹಿಸುವುದು ಅಸೌಕರ್ಯತೆಯನ್ನು ಉಂಟು ಮಾಡುತ್ತದೆ ಎಂದು ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಮಹಿಳಾ ಅಧಿಕಾರಿ / ಸಿಬ್ಬಂದಿಯವರ ಒಟ್ಟಾರೆ ಒಮ್ಮತದ ಅಭಿಪ್ರಾಯವಾಗಿತ್ತು.

ಈ ಹಿನ್ನಲೆಯಲ್ಲಿ, ಇಲಾಖೆಯಲ್ಲಿನ ಮಹಿಳಾ ಪೊಲೀಸ್ ಅಧಿಕಾರಿ / ಸಿಬ್ಬಂದಿಯವರುಗಳ ಮನೋಸ್ಥೈರ್ಯವನ್ನು ಹೆಚ್ಚಿಸುವ ಮತ್ತು ಕರ್ತವ್ಯದಲ್ಲಿ ಶಿಸ್ತು ಪಾಲನೆ, ಏಕಾಗ್ರತೆ, ಏಕರೂಪತೆಯನ್ನು ತರುವಲ್ಲಿ ಹಾಗೂ ಕರ್ತವ್ಯದ ಸಮಯದಲ್ಲಿ ಯಾವುದೇ ಅಡಚಣೆ ಹಾಗೂ ಮುಜುಗರ ಉಂಟಾಗದ ಹಾಗೆ ಎಲ್ಲಾ ಮಹಿಳಾ ಅಧಿಕಾರಿ / ಸಿಬ್ಬಂದಿಗಳಿಗೆ ಏಕರೂಪದ ಸಮವಸ್ತ್ರವನ್ನು ಧರಿಸುವ ಸಲುವಾಗಿ ಈ ಕೆಳಗಿನಂತೆ ಸಮವಸ್ತ್ರ ಧರಿಸುವುದು ಕಡ್ಡಾಯವಾಗಿ / ಕಟ್ಟುನಿಟ್ಟಾಗಿ ಪಾಲಿಸಲು ಇಲಾಖೆಯು ತೀರ್ಮಾನಿಸಿದ್ದು, ಈ ಸಂಬಂಧ ಸರ್ಕಾರದ ಅನುಮತಿ ಮತ್ತು ಮಂಜೂರಾತಿ ಆದೇಶ ಅವಶ್ಯಕತೆ ಇರುತ್ತದೆ.

ಸಮವಸ್ತ್ರ:

- ಪ್ರತಿಯೊಬ್ಬ ಮಹಿಳಾ ಅಧಿಕಾರಿ / ಸಿಬ್ಬಂದಿಯವರು ಶರ್ಟ್ ಮತ್ತು ಪ್ಯಾಂಟ್‌ಗಳನ್ನೊಳಗೊಂಡ (Tuckin / Inshirt) ಸಮವಸ್ತ್ರವನ್ನು ಹಾಗೂ ಈ ಸಮವಸ್ತ್ರದ ಜೊತೆಗೆ ಮಹಿಳಾ ಅಧಿಕಾರಿಗಳು ಬ್ರೌನ್ ಆಕ್ಸ್‌ಫರ್ಡ್ ಶೂ / ಬ್ರೌನ್ ಕ್ರಸ್ಟೆಡ್ ಲೆದರ್ ಬೆಲ್ಟ್ ಹಾಗೂ ಪೀಕ್ ಕ್ಯಾಪ್ ಅಥವಾ ಬ್ಲೂ ಬೆರೆಟ್ ಕ್ಯಾಪ್ ವಿತ್ ಬ್ಯಾಡ್ಜ್‌ಗಳನ್ನೂ ಮತ್ತು ಮಹಿಳಾ ಸಿಬ್ಬಂದಿಗಳು ಬ್ಲ್ಯಾಕ್ ಆಕ್ಸ್‌ಫರ್ಡ್ ಶೂ / ಬ್ಲಾಕ್ ಕ್ರಸ್ಟೆಡ್ ಲೆದರ್ ಬೆಲ್ಟ್ ಹಾಗೂ ಖಾಕಿ ಬೆರೆಟ್ ಕ್ಯಾಪ್ ವಿತ್ ಬ್ಯಾಡ್ಜ್‌ಗಳನ್ನು ಕಡ್ಡಾಯವಾಗಿ ಧರಿಸುವುದು.

. . . 2

* 3 ತಿಂಗಳ ಮೇಲ್ಪಟ್ಟ ಗರ್ಭಿಣಿ ಮಹಿಳಾ ಅಧಿಕಾರಿ / ಸಿಬ್ಬಂದಿಯವರು ಸಮವಸ್ತ್ರದಲ್ಲಿ ವಿನಾಯಿತಿ ಅಗತ್ಯವಿದ್ದಲ್ಲಿ, ಈ ಸಂಬಂಧ ವೈದ್ಯರು ನೀಡುವ ಪ್ರಮಾಣ ಪತ್ರದೊಂದಿಗೆ ಮನವಿಯನ್ನು ಘಟಕಾಧಿಕಾರಿಗಳಿಗೆ ಸಲ್ಲಿಸಿ, (ಅನುಮತಿ ನೀಡುವ ಅಧಿಕಾರವನ್ನು ಕೇವಲ ಘಟಕಾಧಿಕಾರಿಗಳು ಮಾತ್ರ ಹೊಂದಿದ್ದಾರೆ) ಅನುಮತಿಯನ್ನು ಪಡೆದು, ಮಾತೃತ್ವ ರಜೆಯ (Maternity leave) ಮೇಲೆ ತೆರಳುವವರೆಗೆ ಬುಷ್ ಶರ್ಟ್ ಮತ್ತು ಪ್ಯಾಂಟ್ ( Tuckout) ಸಮವಸ್ತ್ರವನ್ನು ಧರಿಸಬಹುದಾಗಿದೆ.

* ಮಾತೃತ್ವ ರಜೆಯನ್ನು (Maternity leave) ಪೂರ್ಣಗೊಳಿಸಿ ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಕಡ್ಡಾಯವಾಗಿ ಮೇಲೆ ತಿಳಿಸಿರುವಂತೆ ನಿಗಧಿತ ಮಾದರಿಯ ಶರ್ಟ್ ಮತ್ತು ಪ್ಯಾಂಟ್ (Tuckin / Inshirt) ಸಮವಸ್ತ್ರವನ್ನು ಧರಿಸಿ ಕರ್ತವ್ಯ ನಿರ್ವಹಿಸತಕ್ಕದ್ದು.

ಆದ್ದರಿಂದ, ಮೇಲಿನಂತೆ ಮಹಿಳಾ ಪೊಲೀಸ್ ಅಧಿಕಾರಿ / ಸಿಬ್ಬಂದಿಗಳು ಸಮವಸ್ತ್ರವನ್ನು ಕಟ್ಟುನಿಟ್ಟಾಗಿ ಧರಿಸುವಂತೆ ಸರ್ಕಾರದ ಅನುಮತಿ ಮತ್ತು ಸೂಕ್ತ ಆದೇಶವನ್ನು ಹೊರಡಿಸಲು ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 142 ಪಿಓಪಿ 2018</u>**
**<u>ಬೆಂಗಳೂರು, ದಿನಾಂಕ:09/ಅಕ್ಟೋಬರ್/2018</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪೊಲೀಸ್ ಇಲಾಖೆಯ ಮಹಿಳಾ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಈ ಕೆಳಗಿನಂತೆ ಸಮವಸ್ತ್ರ ಧರಿಸಲು ಹೆಚ್ಚುವರಿ ಆರ್ಥಿಕ ವೆಚ್ಚವಿಲ್ಲದ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

* ಪ್ರತಿಯೊಬ್ಬ ಮಹಿಳಾ ಅಧಿಕಾರಿ / ಸಿಬ್ಬಂದಿಯವರು ಶರ್ಟ್ ಮತ್ತು ಪ್ಯಾಂಟ್‌ಗಳನ್ನೊಳಗೊಂಡ (Tuckin / Inshirt) ಸಮವಸ್ತ್ರವನ್ನು ಹಾಗೂ ಈ ಸಮವಸ್ತ್ರದ ಜೊತೆಗೆ ಮಹಿಳಾ ಅಧಿಕಾರಿಗಳು ಬ್ರೌನ್ ಆಕ್ಸ್‌ಫರ್ಡ್ ಶೂ / ಬ್ರೌನ್ ಕ್ರಸ್ಟೆಡ್ ಲೆದರ್ ಬೆಲ್ಟ್ ಹಾಗೂ ಪೀಕ್ ಕ್ಯಾಪ್ ಅಥವಾ ಬ್ಲೂ ಬೆರೆಟ್ ಕ್ಯಾಪ್ ವಿತ್ ಬ್ಯಾಡ್ಜ್‌ಗಳನ್ನೂ ಮತ್ತು ಮಹಿಳಾ ಸಿಬ್ಬಂದಿಗಳು ಬ್ಲ್ಯಾಕ್ ಆಕ್ಸ್‌ಫರ್ಡ್ ಶೂ / ಬ್ಲಾಕ್ ಕ್ರಸ್ಟೆಡ್ ಲೆದರ್ ಬೆಲ್ಟ್ ಹಾಗೂ ಖಾಕಿ ಬೆರೆಟ್ ಕ್ಯಾಪ್ ವಿತ್ ಬ್ಯಾಡ್ಜ್‌ಗಳನ್ನು ಕಡ್ಡಾಯವಾಗಿ ಧರಿಸುವುದು.

* 3 ತಿಂಗಳ ಮೇಲ್ಪಟ್ಟ ಗರ್ಭಿಣಿ ಮಹಿಳಾ ಅಧಿಕಾರಿ / ಸಿಬ್ಬಂದಿಯವರು ಸಮವಸ್ತ್ರದಲ್ಲಿ ವಿನಾಯಿತಿ ಅಗತ್ಯವಿದ್ದಲ್ಲಿ, ಈ ಸಂಬಂಧ ವೈದ್ಯರು ನೀಡುವ ಪ್ರಮಾಣ ಪತ್ರದೊಂದಿಗೆ ಮನವಿಯನ್ನು ಘಟಕಾಧಿಕಾರಿಗಳಿಗೆ ಸಲ್ಲಿಸಿ, (ಅನುಮತಿ ನೀಡುವ ಅಧಿಕಾರವನ್ನು ಕೇವಲ ಘಟಕಾಧಿಕಾರಿಗಳು ಮಾತ್ರ ಹೊಂದಿದ್ದಾರೆ) ಅನುಮತಿಯನ್ನು ಪಡೆದು, ಮಾತೃತ್ವ ರಜೆಯ

. . .3

(Maternity leave) ಮೇಲೆ ತೆರಳುವವರೆಗೆ ಬುಷ್ ಶರ್ಟ್ ಮತ್ತು ಪ್ಯಾಂಟ್ ( Tuckout) ಸಮವಸ್ತ್ರವನ್ನು ಧರಿಸಬಹುದಾಗಿದೆ.

- ಮಾತೃತ್ವ ರಜೆಯನ್ನು (Maternity leave) ಪೂರ್ಣಗೊಳಿಸಿ ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಕಡ್ಡಾಯವಾಗಿ ಮೇಲೆ ತಿಳಿಸಿರುವಂತೆ ನಿಗಧಿತ ಮಾದರಿಯ ಶರ್ಟ್ ಮತ್ತು ಪ್ಯಾಂಟ್ (Tuckin / Inshirt) ಸಮವಸ್ತ್ರವನ್ನು ಧರಿಸಿ ಕರ್ತವ್ಯ ನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

09.10.18

(ಎಸ್.ಎಸ್.ಗೋಪಾಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ).

ಇವರಿಗೆ:

1. ಪ್ರಧಾನ ಮಹಾ ಲೇಖಪಾಲರು(ಜಿ & ಎಸ್.ಎಸ್.ಎ), ಮತ್ತು (ಇ & ಎಸ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
2. ಪ್ರಧಾನ ಮಹಾ ಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು.
3. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.
4. ಮಾನ್ಯ ಉಪ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11), ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ), ವಿಧಾನಸೌಧ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.